ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:58, ಹೊಸ ತಿಪ್ಪಸಂದ್ರ

**ವಾರ್ಡ್ ಸಮಿತಿ ಸಭೆ, ದಿನಾಂಕ: 17-07-2021 ರ ಸಭಾ ನಡವಳಿಗಳು**

ದಿನಾಂಕ: **17-07-2021** ರಂದು ಬೆಳಗ್ಗೆ 11.30 ಗಂಟೆಗೆ ವಾರ್ಡ್-58 ಹೊಸ ತಿಪ್ಪಸಂದ್ರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಪಾರ್ಕ್, ಹೆಚ್.ಎ.ಎಲ್ 3ನೇ ಹಂತ ಇಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

ಸಭೆಯಲ್ಲಿ ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು

| ಕ್ರಮ ಸಂ | ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು | ಪ್ರವರ್ಗ |
|---|---|---|
| 1 | ಶ್ರೀ.ಹರೀಶ್‌ಕುಮಾರ್ | ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿರವರು |
| 2 | ಶ್ರೀ.ಎನ್.ನರಸಿಂಹಯ್ಯ | ಕಾರ್ಯದರ್ಶಿ/ಕಿರಿಯ ಅಭಿಯಂತರರು |
| 3 | ಶ್ರೀಮತಿ.ಸರಸ್ವತಿ ಬಾಬು | ಸದಸ್ಯರು |
| 4 | ಶ್ರೀ.ಜಯಶ್ರೀ | |
| 5 | ಶ್ರೀ.ಬಾಲಾಜಿ. ಕೆ. ವೈದ್ಯನಾಥನ್, ರೆಸಿಡೆಂಟ್ಸ್ ಫೋರಮ್, ಎಲ್.ಐ.ಸಿ ಕಾಲೋನಿ | ಸದಸ್ಯರು |
| 6 | ಶ್ರೀಮತಿ.ಪ್ರತಿಮಾ ಗೋಪಾಲ್ ಬೈರಸಂದ್ರ | ಸದಸ್ಯರು |
| 7 | ಶ್ರೀ.ಕೆ.ರವಿ | ಸದಸ್ಯರು |
| 8 | ಶ್ರೀ.ದಿನಕರ್ ಕೃಷ್ಣನ್ | ಸದಸ್ಯರು |
| 9 | ಶ್ರೀ.ಸಂಜಯ್ | ಸದಸ್ಯರು |

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಸಿಬ್ಬಂಧಿಗಳು

1) ಶ್ರೀ.ರಾಮಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
2) ಶ್ರೀ.ಹುಸೇನಪ್ಪ, ಕಿರಿಯ ಆರೋಗ್ಯ ಪರಿವೀಕ್ಷಕರು
3) ಶ್ರೀ.ದಿನಕರ್ ಘನತ್ಯಾಜ್ಯ ನಿರ್ವಹಣೆ ಮೇಲ್ವಿಚಾರಕರು
4) ಶ್ರೀ.ರಾಜಣ್ಣ, ಕಂದಾಯ ವಸೂಲಿಗಾರರು
5) ಶ್ರೀ.ಲಕ್ಷ್ಮಣ್, ಕಂದಾಯ ಮೌಲ್ಯಮಾಪಕರು
6) ಶ್ರೀ.ದೇವರಾಜ್, ಮಾರ್ಷಲ್
7) ಶ್ರೀ.ಪುಣ್ಯಕೋಟಿ, ಕಂದಾಯ ಪರಿವೀಕ್ಷಕರು
8) ಶ್ರೀ.ದುರ್ಗಾಪ್ರಸಾದ್, ಸಹಾಯಕ ಅಭಿಯಂತರರು, ಸ್ಟ್ರೀಟ್‌ಲೈಟ್ಸ್ ಬಿ.ಬಿ.ಎಂ.ಪಿ

ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳನ್ನು ಕಮಿಟಿಯ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವುದಕ್ಕೆ ಸ್ವಾಗತ ಕೋರಿದರು. ಸಭೆಯನ್ನು ಮುಂದುವರೆಸಲು ಸೂಚನೆ ನೀಡಿದ ನಂತರ, ಸಭೆಯನ್ನು ಆರಂಭಿಸಲಾಯಿತು.

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಆರೋಗ್ಯ ಇಲಾಖೆ** | |
| 1 | ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ವಾಕ್ಸಿನೇಶನ್ ತೆಗೆದುಕೊಳ್ಳುತ್ತಿರುವವರ ಸಂಖ್ಯೆ ಕಡಿಮೆ ಇದ್ದು, ಕೋವಿಡ್-19 ವಾಕ್ಸಿನೇಶನ್‌ನ್ನು ತೆಗೆದುಕೊಳ್ಳುವವರ ಸಂಖ್ಯೆಯನ್ನು ಹೆಚ್ಚಿಸಲು ಹಾಗೂ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ, ಕ್ರಮ ಕೈಗೊಳ್ಳಲು ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿಗಳು |
| 2 | ವಾರ್ಡ್ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ಇಲ್ಲದಿರುವುದರಿಂದ ಸದರಿ ಆರೋಗ್ಯ ಕೇಂದ್ರ ಕಟ್ಟಡಕ್ಕೆ ಸ್ಥಳವನ್ನು ಗುರುತಿಸಲು ಸಭೆಯಲ್ಲಿ ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿಗಳು |
| | **ಘನತ್ಯಾಜ್ಯ ನಿರ್ವಹಣೆ** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸಲು ವಾರ್ಡ್ ಸಮಿತಿ ಸದಸ್ಯರು ತಿಳಿಸಿದರು. | ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು |
| 2 | ವಾರ್ಡ್ ವ್ಯಾಪ್ತಿಯಲ್ಲಿರುವ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ವಾರ್ಡ್ ಸಮಿತಿ ಸದಸ್ಯರು ತಿಳಿಸಿದರು. ಸೂಚಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು |
| 3 | ವಾರ್ಡ್ ವ್ಯಾಪ್ತಿಯಲ್ಲಿ ಮನೆ-ಮನೆಯಿಂದ ಕಸ ಸಂಗ್ರಹಣೆಯು ಸಮರ್ಪಕವಾಗಿರುವುದಿಲ್ಲವಾದ್ದರಿಮದ ಇದನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ.ಬಾಲಾಜಿ ಕೆ. ವೈದ್ಯನಾಥನ್, ರೆಸಿಡೆಂಟ್ಸ್ ಫೋರಮ್, ಎಲ್.ಐ.ಸಿ ಕಾಲೋನಿ ರವರು ಮಾತನಾಡಿ ಪೌರಕಾರ್ಮಿಕರಿಗೆ ಶೌಚಾಲಯ ಇಲ್ಲದಿರುವುದರಿಂದ ಹಾಳಿಯಾಗಿರುವ ಒಣ ತ್ಯಾಜ್ಯ ಸಂಗ್ರಹಣಾ ಘಟಕದಲ್ಲಿ ಶೌಚಾಲಯವನ್ನು ನಿರ್ಮಿಸಿಕೊಡಲು ಸೂಚಿಸಿದರು. | ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು |
| 5 | ವಾರ್ಡ್ ವ್ಯಾಪ್ತಿಯಲ್ಲಿ ಸಾಕುನಾಯಿ ಮತ್ತು ಬೀದಿ ನಾಯಿಗಳಿಂದ ರಸ್ತೆಯಲ್ಲಿ ಅಶುಚಿತ್ವ ಉಂಟಾಗುತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು |
| | **ANIMAL HUSBANDARY** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗುತ್ತಿದ್ದು, ವಾರ್ಡ್‌ನಲ್ಲಿ ಕಂಡುಬರುವ ಬೀದಿನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿಸಲು ಸಬೆಯಲ್ಲಿದ್ದ ಸಮಿತಿ ಸದಸ್ಯರು ಕೋರಿದರು. | ANIMAL HUSBANDARY |
| | **ಕಾಮಗಾರಿ ಇಲಾಖೆ** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಇರುವ ಡೆಬ್ರಿಸ್‌ಗಳನ್ನು ತೆರವುಗೊಳಿಸಲು ಶ್ರೀ.ಬಾಲಾಜಿ ಕೆ. ವೈದ್ಯನಾಥನ್, ರೆಸಿಡೆಂಟ್ಸ್ ಫೋರಮ್, ಎಲ್.ಐ.ಸಿ ಕಾಲೋನಿ ರವರು ಕೋರಿದರು. | Assistant Engineer-BBMP |
| | **ಕಂದಾಯ ಇಲಾಖೆ** | |
| 1 | ಶ್ರೀ.ಲಕ್ಷ್ಮಣ್ ಕಂದಾಯ ಮೌಲ್ಯಮಾಪಕರು ವಾರ್ಡ್ ವ್ಯಾಪ್ತಿಯಲ್ಲಿ 9200 ಸ್ವತ್ತುಗಳಿದ್ದು, 499 ಸ್ವತ್ತು ವಲಯ ಬದಲಾವಣೆ ಮಾಡಿ, ಕಂದಾಯ ಪಾವತಿಸಿರುವ ಹಿನ್ನೆಲೆಯಲ್ಲಿ ಪರಿಷ್ಕೃತವಾಗಿ ಕಂದಾಯವನ್ನು ನಿಗಧಿ ಪಡಿಸಿ ಕಂದಾಯ ಪಾವತಿಸಲು ಮಾಲೀಕರಿಗೆ ನೋಟೀಸು ಜಾರಿಮಾಡಲಾಗಿರುತ್ತದೆ ಎಂದು ತಿಳಿಸಿದರು, ಇದರ ಬಗ್ಗೆ ಕ್ರಮ ಕೈಗೊಳ್ಳಲು ವಾರ್ಡ್ ಸಮಿತಿಯ ಅಧ್ಯಕ್ಷರು ಸೂಚಿಸಿದರು. | ARO C.V.Raman Nagara |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

ಕಾರ್ಯದರ್ಶಿಗಳು
P AAIAPA C©AIAAVIJIA
°AqiO ,ASI58-°IE ,AWYI,AZÀ

ಅಧ್ಯಕ್ಷರು
°AUIE FEAQE I CCPAJ UIA
°AqiO ,ASI58-°IE ,AWYI,AZÀ